ಆ) ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಇಲ್ಲ

ಆ) ಅಪೆಕ್ಸ್ ಬ್ಯಾಂಕು ಈ ಸೌಲಭ್ಯ ಕಲ್ಪಿಸಲು ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳನ್ನು ಪ್ರಾಧಿಕಾರಗಳನ್ನು ಸಂಪರ್ಕಿಸಲು ಅಪೆಕ್ಸ್ ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಗ್ರಾಹಕ ಜಾಗೃತಿ ಸಮಿತಿಗಳ ಬಗ್ಗೆ

4702 (5188) ಶ್ರೀ ಯೋಗೇಸ್ ಭಟ್.ಎನ್. (ಮಂಗಳೂರು) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಹಕ ಜಾಗೃತಿಯನ್ನು ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ರಾಜ್ಯದಲ್ಲಿ ಎಷ್ಟು ಜಾಗೃತ ಸಮಿತಿಗಳಿವೆ; ಅವುಗಳ ಕಾರ್ಯವ್ಯಾಪ್ತಿ ಏನು;

ಇ) ಅವುಗಳಿಗೆ ಬಿಡುಗಡೆ ಯಾವ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಗ್ರಾಹಕರ ಹಕ್ಕುಗಳು ಹಗೂ ಗ್ರಾಹಕರಿಗೆ ದೊರೆಯುವ ಪರಿಹಾರಗಳ ಬಗ್ಗೆ ಜನಗೆತೆಗೆ ಜಾಗೃತಿ ಮೂಡಿಸಲು ಪ್ರತಿ ವರ್ಷವೂ ಮಾರ್ಚ್ 15 ರಂದು ವಿಶ್ವ ಗ್ರಾಹಕರ ದಿನಾಚರಣೆ ಹಾಗೂ ಡಿಸೆಂಬರ್ 24 ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನು ರಾಜಧಾನಿಯೂ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಆಚರಿಸಲಾಗುತ್ತಿದೆ. ರಾಜ್ಯ ಸರ್ಕಾರವು ಗ್ರಾಹಕರ ಜಾಗೃತಿಯನ್ನು ಹೆಚ್ಚಿಸುವ ಬಗ್ಗೆ ಅವಶ್ಯಕ ಸಲಹೆ ಸೂಚನೆಗಳನ್ನು ನೀಡುವ ಸಲುವಾಗಿ ಕರ್ನಾಟಕ ಗ್ರಾಹಕ ರಕ್ಷಣಾ ಪರಿಷತ್ತನ್ನು ಸ್ಥಾಪಿಸಿರುತ್ತದೆ. ಜಿಲ್ಲೆಯಲ್ಲಿರುವ ಅನುದಾನಿತ ಗ್ರಾಹಕ ಸಂಸ್ಥೆಗಳು ತಮ್ಮ ಜಿಲ್ಲಾ ಆಡಳಿತದ ಸಹಯೋಗದೊಂದಿಗೆ ಗ್ರಾಹಕರಿಗೆ ಅರಿವು ಮೂಡಿಸುವ ಸಂಕೀರ್ಣ ವಸ್ತುಪ್ರದರ್ಶನ, ಬಿತ್ತಿಪತ್ರ ಹಾಗೂ ಕೈಪಿಡಿಗಳನ್ನು ಹೊರತರುತ್ತಿದೆ. ಸಾರ್ವಜನಿಕ ವಿತರಣಾ ಪದ್ಧತಿಯ ಕುರಿತ ಮಾಹಿತಿಯನ್ನೊಳಗೊಂಡ ನಾಗರೀಕ ಸನ್ನದ್ದನ್ನು ಇಲಾಖೆಯ ಹೊರತಂದಿದು ಇದರಲ್ಲಿ ಪಡಿತರ ಚೀಟಿದಾರರಿಗೆ ನ್ಯಾಯಬೆಲೆ ಅಂಗಡಿಗಳು, ವಿವಿಧ ಪಡಿತರ ಚೀಟಿಗಳು, ಪಡಿತರ ಚೀಟಿಯನ್ನು ಪಡೆಯುವ ಬಗ್ಗೆ ಮಾಹಿತಿಗಳನ್ನು ಒಳಗೊಂಡಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಗ್ರಾಹಕ ಅರಿವು ಮೂಡಿಸಲು ಗ್ರಾಹಕ ಮಾಹಿತಿ ಕೇಂದ್ರವನ್ನು ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಸ್ಥಾಪಿಸಲು ಕ್ರಮ ವಹಿಸಲಾಗುತ್ತದೆ. ಪಡಿತರ ಚೀಟಿದಾರರ ಕುಂದುಕೊರತೆಗಳನ್ನು ನಿವಾರಿಸಲು ಜಿಲ್ಲಾ ವ್ಯಾಪ್ತಿಯಲ್ಲಿ ಆಹಾರ ಅದಾಲತನ್ನು ನಡೆಸಲಾಗುತ್ತಿದೆ. ಜನಜಾಗೃತಿ ಶಿಬಿರವನ್ನು ಮೊದಲನೆ ಹಂತದಲ್ಲಿ 5 ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ. ಜನಸ್ಪಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಪಡಿತರ ಚೀಟಿದಾರರ ಹಗೂ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಲಾಗುತ್ತಿದೆ. ದೂರದರ್ಶನ ಮತ್ತು ರೇಡಿಯೋದಲ್ಲಿ ಫೋನ್–ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಜನರಿಗೆ bngfes@ kar nic. in ಮೂಲಕ ಜನರಿಗೆ ಒದಗಿಸಲಾಗುತ್ತಿದೆ.

ಆ) ರಾಜ್ಯದಲ್ಲಿ 79 ಗ್ರಾಹಕ ಸಂಸ್ಥೆಗಳಿದ್ದು ಆಯಾ ಜಿಲ್ಲಾ / ವಲಯಗಳ ವ್ಯಾಪ್ತಿಯಲ್ಲಿ ಅವುಗಳ ಕಾರ್ಯವ್ಯಾಪ್ತಿಯು ಕೆಳಕಂಡಂತಿರುತ್ತದೆ.

1. ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ಗ್ರಾಹಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪುಸ್ತಕಗಳನ್ನು ಹೊರಡಿಸುವುದು ಹಾಗೂ ಶ್ರವಣ ಮಾಧ್ಯಮ ವಸ್ತುಗಳನ್ನು ಹೊರತರುವುದು.
2. ಗ್ರಾಹಕ ಜಾಗೃತಿ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಕ್ಕೆ ಕುರಿತಂತೆ ತರಬೇತಿ ಮತ್ತು ಸಂಶೋಧನಾ ಕಾರ್ಯ ಹಮ್ಮಿಕೊಳ್ಳುವುದು.
3. ಸಮುದಾಯ ಆಧಾರಿತ ಗ್ರಾಮೀಣ ಜಾಗೃತಿ ಯೋಜನೆ
4. ಗ್ರಾಹಕರ ದೂರು ನಿವಾರಣೆ, ಕೌನ್ಸಿಲಿಂಗ್ ಮತ್ತು ಮಾರ್ಗದರ್ಶಿಯಾಗಿ ಕಛೇರಿಗಳನ್ನು ಕರೆಯುವುದು.
5. ಗ್ರಾಹಕ ವಸ್ತುಗಳನ್ನು ಪರೀಕ್ಷಿಸುವ ಲ್ಯಾಬೋರೇಟರಿಗಳನ್ನು ತೆರೆಯುವುದು.
6. ಗ್ರಾಹಕರ ಶಿಕ್ಷಣಕ್ಕೆ ಸಂಬಂದಿಸಿದಂತೆ ಖಾಯಂ ಸಂಸ್ಥೆಗಳನ್ನು ಜಿಲ್ಲಾ ಮತ್ತು ತಾಲ್ಲೂಕುವಾರು ರಚಿಸಲು ಒಳಹಂದರವನ್ನು ಒದಗಿಸುವುದು.

ಇ)

ಕ್ರ ಸಂ.	ಜಿಲ್ಲೆ ವಲಯದ ಹೆಸರು	ಗ್ರಾಹಕ ಸಂಸ್ಥೆಗಳ ವಿವರ ಮತ್ತು ಮತ್ತು	ಬಿಡುಗಡೆಯಾದ ಹಣದ ವಿವರ (ರೂ.ಗಳಲ್ಲಿ)
1.	ಪಶ್ಚಿಮ ವಲಯ	ಕನ್ಸೂ ಮರ್‌ವೈಟ್ ಎಜುಕೇಷನ್ ಅಂಡ್ ಅವೇರ್‌ನೆಸ್ ಟ್ರಸ್ಟ್ ರೆಂಕೋ ಲೇಔಟ್, ವಿಜಯ ನಗರ, ಬೆಂಗಳೂರು	2.35 ಲಕ್ಷ
2.	ಉತ್ತರ ವಲಯ	ಯಲಹಂಕ ವಿಶ್ವಭಾರತಿ ವೆಲ್‌ಫೇರ್ ಸೊಸೈಟಿ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಯಲಹಂಕ, ಬೆಂಗಳೂರು –64	41,400–00
3.	ಬಳ್ಳಾರಿ	ಪ್ರಶಾಂತಿ ರೂರಲ್ ಎಜುಕೇಷನ್ ಸೊಸೈಟಿ, ಶಂಕರ ಕಾಲೋನಿ ಬಳ್ಳಾರಿ	30,000–00
4.	ಬೀದರ್	ಪ್ರಶಾಂತಿ ರೂರಲ್ ಎಜುಕೇಷನಲ್ ಸೊಸೈಟಿ, ಶಂಕರ ಕಾಲೋನಿ, ಬೀದರ್	81,000–00
5.	ಚಾಮರಾಜನಗರ	ಸೇವಾ ಭಾರತಿ ಟ್ರಸ್ಟ್, ಚಾಮರಾಜನಗರ	38,000–00
6.	ಚಿತ್ರದುರ್ಗ	1) ರೇಣುಕಾ ಮಹಿಳಾ ಸಮಾಜ, ಮಾರಿಕಾಂಬ ದೇವಸ್ಥಾನ ಹತ್ತಿರ, ವೇದಾವತಿ ನಗರ, ಹಿರಿಯೂರು ಟೌನ್	36,000–00

1	2	3	4
		2) ಹರಿಹರ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಸಿದ್ದಗಂಗನಹಳ್ಳಿ ರಾಮಘಟ್ಟ ಪೋಸ್ಟ್	13,5000–00
		3) ಪಜರತ್ ಅಲೀಷಿ ಮಾರಲ್ ಮತ್ತು ಸ್ಪಿರಿಚುಯಲ್ ಅಸೋಸಿಯೇಷನ್, ಐಮಂಗಲ, ಹಿರಿಯೂರು, ಚಿತ್ರದುರ್ಗ	31,500–00
		4) ಸೋಷಿಯಲ್ ಕಲ್ಚರಲ್ ಎಜುಕೇಷನಲ್ ಎಕಾನಾಮಿಕ್ ಅಂಡ್ ಮೆಡಿಕಲ್ ಸೊಸೈಟಿ, ಹಿರೇಹಳ್ಳಿ, ಚಳ್ಳಕೆರೆ	54,000–00
7.	ಧಾರವಾಡ	ಕನ್ಸೂಮರ್ ಪ್ರೊಟಕ್ಷನ್ ಅಂಡ್ ರಿಸರ್ಚ್ ಫೌಂಡೇಷನ್ (ರಿ)	2.00,00–00
8.	ದಕ್ಷಿಣ ಕನ್ನಡ	ಶ್ರೀ ಹೆಚ್. ರಂಗ ಖಿಜಾಂಚಿ, ಬಳಕೆದಾರರ ಹಿತರಕ್ಷಣಾ ವೇದಿಕೆ, ಮಿತ್ರಮಂಡಳಿ, ಸೂರತ್ಕಲ್, ಮಂಗಳೂರು ತಾ. ದಕ್ಷಿಣ ಕನ್ನಡ	18,000–00
9.	ಕೋಲಾರ	1) ಡಾ: ಬಿ.ಆರ್. ಅಂಬೇಡ್ಕರ್ ಎಜುಕೇಷನ್ ಸೊಸೈಟಿ, ವಿಭೂತಿಪುರ, ಕೋಲಾರ	45,000–00
		2) ಶ್ರೀ ರಾಮಕೃಷ್ಣಪರಮಹಂಸ ಎಜುಕೇಷನ್ ಸೊಸೈಟಿ, ಗುಂಡ್ಲುಪಲ್ಲಿ, ಗೂಳೂರು ಹೋಬಳಿ, ಬಾಗೇಪಲ್ಲಿ	40,500–00
10.	ಮೈಸೂರು	ಮೈಸೂರು ಜಿಲ್ಲಾ ಗ್ರಾಹಕರ ಸಂಸ್ಥೆಗಳ ಒಕ್ಕೂಟ, 1138/3 ನಾರಾಯಣಶಾಸ್ತ್ರಿ ರಸ್ತೆ ಮೈಸೂರು,	69,120–00
11.	ಮಂಡ್ಯ	1) ಶ್ರೀ ಅಕ್ಷಯ ನಿಕೇತನ ಟ್ರಸ್ಟ್ ಸೊನಗಹಳ್ಳಿ, ಮಂಡ್ಯ ತಾಲ್ಲೂಕು.	22,500–00

1	2	3	4
		2) ರಿವರ್ ವ್ಯಾಲಿ ಆರ್ಗನೈಜೇಷನ್ ಫಾರ್‌ರೂರಲ್ ಡೆವಲಪ್‌ಮೆಂಟ್ ಶ್ರೀರಂಗಪಟ್ಟಣ.	77,400–00
12.	ಉಡುಪಿ	ಬಳಕೆದಾರರ ವೇದಿಕೆ, ಉಡುಪಿ	22.500–00

ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆ

4703 (5189) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಲಾದ ಪಡಿತರ ಚೀಟಿಗಳೆಷ್ಟು; ಅವುಗಳಲ್ಲಿ ಎಷ್ಟು ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದೆ; ಯಾವ ಕ್ರಮ ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಆ) ಅಂತ್ಯೋದಯ ಅನ್ನಯೋಜನೆಯ ಅನುಷ್ಠಾನದ ವಿವರಗಳು; ಪಡೆದ ಫಲಾನುಭವಿಗಳು ಹಾಗೂ ಕೊಟ್ಟ ಆಹಾರ ಧಾನ್ಯಗಳ ಜಿಲ್ಲಾವಾರು ವಿವರ ನೀಡುವುದು;

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಮಾಡಲಾದ ಹೊಸ ಪಡಿತರ ಚೀಟಿಗಳು, ಗುರುತಿಸಲಾದ ಅನರ್ಹ/ನಕಲಿ ಪಡಿತರ ಚೀಟಿಗಳ ಜಿಲ್ಲಾವಾರು ವಿವರಗಳನ್ನು ಅನುಬಂದ–1 ರಲ್ಲಿ ಲಗತ್ತಿಸಿದೆ.

ಈ ರೀತಿ ಗುರುತಿಸಲಾದ ಅನರ್ಹ/ನಕಲಿ ಪಡಿತರ ಚೀಟಿಗಳನ್ನು ರದ್ದು ಪಡಿಸಿ ಪಡಿತರ ಹಂಚಿಕೆಯನ್ನು ನಿಲುಗಡೆ ಮಾಡಲಾಗಿರುತ್ತದೆ.

ಆ) ಕೇಂದ್ರ ಸರ್ಕಾರ ಪ್ರಾಯೋಜಿಸಿರುವ ಅಂತ್ಯೋದಯ ಅನ್ನಯೋಜನೆಯನ್ನು ರಾಜ್ಯದಲ್ಲಿ ಆಗಸ್ಟ್, 2001ರ ಮಾಹೆಯಿಂದ ಅನುಷ್ಠಾನಗೊಳಿಸಲಾಗಿದೆ.

ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಪೈಕಿ ಅತೀ ಕಡು ಬಡ ಕುಟುಂಬಗಳನ್ನು ಈ ಯೋಜನೆಯಡಿ ಫಲಾನುಭವಿಗಳಾಗಿ ಆಯ್ಕೆ ಮಾಡಲಾಗಿರುತ್ತದೆ. ಕೇಂದ್ರ ಸರ್ಕಾರ ನಿಗದಿ ಪಡಿಸಿದಂತೆ ರಾಜ್ಯದಲ್ಲಿ ಒಟ್ಟು 479700 ಫಲಾನುಭವಿಗಳನ್ನು ಗುರುತಿಸಿ ಅಂತ್ಯೋದಯ ಅನ್ನ ಪಡಿತರ ಚೀಟಿಯನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಮಾಹೆಯಾನ 28 ಕೆ.ಜಿ. ಅಕ್ಕಿ ಹಾಗೂ 7 ಕೆ.ಜಿ. ಗೋಧಿಯನ್ನು ಅತ್ಯಂತ ಹೆಚ್ಚು ಸಹಾಯ ಧನಯುಕ್ತ ದರದಲ್ಲಿ ವಿತರಿಸಲಾಗುತ್ತಿದೆ ಅಂದರೆ ಅಕ್ಕಿ ಕೆ.ಜಿ. ಒಂದಕ್ಕೆ ರೂ. 3.00 ರ ದರದಲ್ಲಿ ಹಾಗೂ ಗೋದಿ ಕೆ.ಜಿ.ಗೆ ರೂ. 2.00 ರ ದರದಲ್ಲಿ ವಿತರಿಸಲಾಗುತ್ತಿದೆ.

ಪ್ರಸ್ತುತ ಕೇಂದ್ರ ಸರ್ಕಾರವು ಈ ಯೋಜನೆಯನ್ನು ರಾಜ್ಯದಲ್ಲಿ ಇನ್ನೂ ಹೆಚ್ಚುವರಿಯಾಗಿ 2,40,000 ಕುಟುಂಬಗಳಿಗೆ ವಿಸ್ತರಿಸಲು ಅನುಮತಿ ನೀಡಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ 4,79,700 ಹಾಗೂ ಹೊಸದಾಗಿ ವಿತರಿಸಲು ಉದ್ದೇಶಿಸಲಾಗಿರುವ 2,40,000 ಕುಟುಂಬಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:–